ಅಧ್ಯಾಯ ೧೧

# ಪ್ರಜಾಪ್ರಭುತ್ವ ಮೂಲಬೇರುಗಳು: ಭಾಗ ೨ ಗ್ರಾಮೀಣ ಭಾಗದ ಸ್ಥಳೀಯ ಸರ್ಕಾರ

"ನಿಜವಾದ ಭಾರತವು ಅದರ ಹಳ್ಳಿಗಳಲ್ಲಿ ವಾಸಿಸುತ್ತಿದೆ"

- ಎಂ.ಕೆ.ಗಾಂಧಿ

**ಕೆಲವು ಮುಖ್ಯ ಪ್ರಶ್ನೆಗಳು ?**

೧. ಪಂಚಾಯತ ರಾಜ್ಯ ಸಂಸ್ಥೆಗಳು ಎಂದರೇನು?

೨. ಅವುಗಳ ಕಾರ್ಯಗಳು ಯಾವುವು?

೩. ಪ್ರಜಾಪ್ರಭುತ್ವ ಮತ್ತು ಆಡಳಿತದಲ್ಲಿ ಅವುಗಳಿಗೆ ಏಕೆ ಮಹತ್ವವಿದೆ?

ಸ್ಥಳೀಯ ಮಟ್ಟದಲ್ಲಿ ಸರ್ಕಾರ ಹೇಗೆ ಕಾರ್ಯನಿರ್ವಹಿಸುತ್ತದೆ ಎಂಬುದನ್ನು ನಾವೀಗ ನೋಡೋಣ. ಈ ಅಧ್ಯಾಯದಲ್ಲಿ ನಮ್ಮ ಗಮನವು ಗ್ರಾಮೀಣ ಭಾಗದಲ್ಲಿನ ಸ್ಥಳೀಯ ಸರ್ಕಾರದ ಮೇಲೆ ಇರುತ್ತದೆ. ನಾವು ಮುಂದಿನ ಅಧ್ಯಾಯದಲ್ಲಿ ನಗರ ಪ್ರದೇಶದ ಆಡಳಿತ ತಿಳಿದುಕೊಳ್ಳುತ್ತೇವೆ.

ಭಾರತವು ವಿಸ್ತಾರ ಗಾತ್ರ ಮತ್ತು ವೈವಿಧ್ಯತೆ ಹೊಂದಿದ ದೇಶ. ನಮ್ಮಲ್ಲಿ ಸುಮಾರು ೬೦೦,೦೦೦ ಹಳ್ಳಿಗಳು, ೮,೦೦೦ ಪಟ್ಟಣಗಳು ಮತ್ತು ೪,೦೦೦ ಕ್ಕೂ ಹೆಚ್ಚು ನಗರಗಳಿವೆ. ನಮ್ಮ ಜನಸಂಖ್ಯೆ ೧.೪ ಬಿಲಿಯನ್ ದಾಟಿದೆ. ಅದರಲ್ಲಿ ಸುಮಾರು ಮೂರನೇ ಎರಡರಷ್ಟು ಜನರು ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ಈ ಸಂಕೀರ್ಣ ಸಮಾಜದಲ್ಲಿ ನಾವು ನಮ್ಮನ್ನು ಹೇಗೆ ಆಳುತ್ತೇವೆ ಎನ್ನುವುದು ಪ್ರಶ್ನೆಯಾಗಿದೆ?



© NCERT not to be republished

ಹಿಮಾಲಯದ ಬೆಟ್ಟಗುಡ್ಡಗಳಲಿರುವ ಲಕ್ಷ್ಮಣಪುರ ಎಂಬ ಸಣ್ಣ ಹಳ್ಳಿಗೆ ಪ್ರವಾಸ ಕೈಗೊಳ್ಳೋಣ. ಇದು ೨೦೦ ಮನೆಗಳನ್ನು ಮತ್ತು ಸುಮಾರು ೭೦೦ ಜನಸಂಖ್ಯೆಯನ್ನು ಹೊಂದಿದೆ. ಅವರಲ್ಲಿ ಹೆಚ್ಚಿನವರು ರೈತರು. ಜನರು ತಮ್ಮ ಭೂಮಿಯಲ್ಲಿ ಸ್ವತಃ ತಾವೆ ಕೃಷಿ ಮಾಡುತ್ತಾರೆ. ಹಸು, ಆಡುಗಳನ್ನು ಸಾಕುತ್ತಾರೆ. ಕೆಲವರ ಸಂಬಂಧಿಕರು ಸಶಸ್ತ್ರ/ಸೈನ್ಯ ಪಡೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಕೆಲವು ಯುವ ಗ್ರಾಮಸ್ಥರು ಉದ್ಯೋಗವನ್ನು ಹುಡುಕಿಕೊಂಡು ನಗರಕ್ಕೆ ವಲಸೆ ಹೋಗಿದ್ದಾರೆ. ಈ ಹಳ್ಳಿಯ ಅಗತ್ಯಗಳು ಯಾವುವು? ಬಹುಶಃ ಹೊಲಗಳಿಗೆ ನೀರು, ಭಾರಿ ಮಳೆಯಿಂದಾಗಿ ಹಾನಿಗೊಳಗಾದ ಮುಖ್ಯ ರಸ್ತೆಯನ್ನು ದುರಸ್ತಿ ಮಾಡುವುದು. ಗ್ರಾಮದ ಪ್ರಾಥಮಿಕ ಶಾಲೆಯನ್ನು ನಿರ್ವಹಿಸುವುದು? ತಮ್ಮ ದೈನಂದಿನ ಜೀವನದ ಮೇಲೆ ಪರಿಣಾಮ ಬೀರುವ ಇಂತಹ ವಿಷಯಗಳ ಬಗ್ಗೆ ಗ್ರಾಮಸ್ಥರು ಹೇಗೆ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾರೆ? ಆ ಅಗತ್ಯಗಳನ್ನು ಪೂರೈಸಲು ಅವರು ಸಂಪನ್ಮೂಲಗಳನ್ನು ಎಲ್ಲಿಂದ ಪಡೆಯುತ್ತಾರೆ? ಭೂಮಿಯ ಬಗ್ಗೆ ವಿವಾದವಿದ್ದರೆ ಅಥವಾ ಕೆಲವು ಬೆಳೆ ಕಳ್ಳತನವಾದರೆ ಏನಾಗುತ್ತದೆ? ಹಳ್ಳಿಯಲ್ಲಿ ಇಂತಹ ಅನೇಕ ಪ್ರಶ್ನೆಗಳು ಉದ್ಭವಿಸಬಹುದು. ಇಂತಹ ಪ್ರತಿಯೊಂದು ವಿಷಯದ ಪರಿಹಾರಕ್ಕೆ ಜನರು ರಾಜ್ಯ ಅಥವಾ ರಾಷ್ಟ್ರ ರಾಜಧಾನಿಗೆ ಓಡಬಹುದೇ? ಯೋಚಿಸಿ

## ಪಂಚಾಯತ್ ರಾಜ್ ವ್ಯವಸ್ಥೆ

ಭಾರತದ ಪ್ರತಿಯೊಂದು ಹಳ್ಳಿಯಂತೆ 'ಲಕ್ಷ್ಮಣಪುರ' ಜನರು ಪಂಚಾಯತ್ ಎಂದು ಕರೆಯಲ್ಪಡುವ **ಸ್ಥಳೀಯ** ಸರ್ಕಾರದ ವ್ಯವಸ್ಥೆಯನ್ನು ಹೊಂದಿದ್ದಾರೆ. ಇದು 'ಗ್ರಾಮ ಮಂಡಳಿ'ಯನ್ನು ಸೂಚಿಸುತ್ತದೆ. ಪಂಚಾಯತಿಗಳು ಆಡಳಿತವನ್ನು ಜನರಿ ಹತ್ತಿರಕ್ಕೆ ಕೊಂಡೊಯ್ಯುತ್ತವೆ. ಇದರಿಂದಾಗಿ ಅವರು ನಿರ್ಧಾರ ತೆಗೆದುಕೊಳ್ಳುವ, ಆಡಳಿತ ವ್ಯವಹಾರಗಳಲ್ಲಿ ಸಕ್ರಿಯವಾಗಿ ಭಾಗವಹಿಸಲು ಸಾಧ್ಯವಾಗುತ್ತದೆ. **ಪಂಚಾಯತ ರಾಜ್** ಎಂದೂ ಕರೆಯಲ್ಪಡುವ 'ಪಂಚಾಯತ್ ವ್ಯವಸ್ಥೆಯು' **ಸ್ವಯಂ ಆಡಳಿತದ** ಒಂದು ರೂಪವಾಗಿದೆ. ಸ್ಥಳೀಯ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಅಭಿವೃದ್ಧಿಯನ್ನು ಉತ್ತೇಜಿಸುವಲ್ಲಿ ಮತ್ತು ಸರ್ಕಾರದ ಯೋಜನೆಗಳ ಪ್ರಯೋಜನಗಳು ತಳಮಟ್ಟವನ್ನು ತಲುಪಿಸಲು ಪಂಚಾಯಿತಿಗಳು ಪ್ರಮುಖ ಪಾತ್ರವಹಿಸುತ್ತವೆ. ರೇಖಾಚಿತ್ರದಿಂದ ಸ್ಪಷ್ಟವಾಗುವಂತೆ ಪಂಚಾಯತ ರಾಜ್ ವ್ಯವಸ್ಥೆಯು ಗ್ರಾಮ, ತಾಲೂಕು ಮತ್ತು ಜಿಲ್ಲೆ ಎಂಬ ಮೂರು ಹಂತಗಳಲ್ಲಿ ಕೆಳಮಟ್ಟದಿಂದ ಮೇಲಕ್ಕೆ ಕಾರ್ಯನಿರ್ವಹಿಸುತ್ತದೆ.




ಚಿತ್ರ ೧೧.೧



© NCERT not to be republished

ರೇಖಾಚಿತ್ರದಿಂದ ಸ್ಪಷ್ಟವಾಗುವಂತೆ ಪಂಚಾಯತ ರಾಜ್ ವ್ಯವಸ್ಥೆಯು ಗ್ರಾಮ, ತಾಲೂಕು ಮತ್ತು ಜಿಲ್ಲೆ ಎಂಬ ಮೂರು ಹಂತಗಳಲ್ಲಿ ಕೆಳಮಟ್ಟದಿಂದ ಮೇಲಕ್ಕೆ ಕಾರ್ಯನಿರ್ವಹಿಸುತ್ತದೆ. ಇದನ್ನು '**ಮೂರು ಹಂತದ ವ್ಯವಸ್ಥೆ**' ಎಂದು ಕರೆಯಲಾಗುತ್ತದೆ. ಒಟ್ಟಾರೆಯಾಗಿ ಈ ಸಂಸ್ಥೆಗಳ ಜವಾಬ್ದಾರಿ ಕೃಷಿ, ವಸತಿ, ರಸ್ತೆಗಳ ನಿರ್ವಹಣೆ, ಜಲ ಸಂಪನ್ಮೂಲಗಳ ನಿರ್ವಹಣೆ, ಶಿಕ್ಷಣ, ಆರೋಗ್ಯ, ರಕ್ಷಣೆ ಮತ್ತು ಸಮಾಜ ಕಲ್ಯಾಣದಿಂದ ಸಾಂಸ್ಕೃತಿಕ ಚಟುವಟಿಕೆಗಳವರೆಗೆ ಜಿಲ್ಲೆಯ ಜೀವನದ ಬಹುತೇಕ ಎಲ್ಲಾ ಅಂಶಗಳನ್ನು ಒಳಗೊಂಡಿರುತ್ತವೆ.

## ಗ್ರಾಮ ಪಂಚಾಯತ್

ಅಂಕಿ ಅಂಶಗಳಾದ, ೧೬೪ ನೇ ಪುಟ್ಟದಲ್ಲಿರುವ ಚಿತ್ರ ೧೧.೧ ರ ಮೂಲಕವಾಗಿ ನೋಡೋಣ. ಗ್ರಾಮೀಣ ಪ್ರದೇಶದ ಜನರಿಗೆ ಅತ್ಯಂತ ಹತ್ತಿರವಿರುವುದೇ ಗ್ರಾಮ ಪಂಚಾಯಿತಿ. ಗ್ರಾಮದ ಜನರೇ ಗ್ರಾಮಸಭೆಯ ಸದಸ್ಯರನ್ನು ನೇರವಾಗಿ ಆಯ್ಕೆ ಮಾಡುತ್ತಾರೆ. ಇದು ಮತದಾರರಾಗಿ ನೋಂದಾಯಿಸಲ್ಪಟ್ಟ ಹಳ್ಳಿಯ ಜನರ (ಅಥವಾ ನೆರೆಯ ಹಳ್ಳಿಗಳ ಗುಂಪು) ವಯಸ್ಕರ ಗುಂಪಾಗಿದೆ. ಗ್ರಾಮ ಸಭೆಯಲ್ಲಿ, ಮಹಿಳೆಯರು ಮತ್ತು ಪುರುಷರು ತಮ್ಮ ಪ್ರದೇಶಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನು ಚರ್ಚಿಸುತ್ತಾರೆ. ತಾವೇ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾರೆ. ಪ್ರತಿ ಗ್ರಾಮ ಪಂಚಾಯತಿಯು 'ಸರಪಂಚ್' ಅಥವಾ ಪ್ರಧಾನ ಎಂದು ಕರೆಯಲ್ಪಡುವ ಮುಖ್ಯಸ್ಥ ಅಥವಾ ಅಧ್ಯಕ್ಷರನ್ನು ಆಯ್ಕೆ ಮಾಡುತ್ತದೆ. ಇತ್ತೀಚಿನ ವರ್ಷಗಳಲ್ಲಿ, ಹೆಚ್ಚು ಹೆಚ್ಚು ಮಹಿಳೆಯರು ಗ್ರಾಮ ಪಂಚಾಯತಿಯ ಅಧ್ಯಕ್ಷರಾಗುತ್ತಿದ್ದಾರೆ.

© NCERT not to be republished



## ಆದರ್ಶಪ್ರಾಯ ಸರಪಂಚರು (ಗ್ರಾಮ ಪಂಚಾಯತಿ ಅಧ್ಯಕ್ಷರು):

**ಜ್ಞಾನೇಶ್ವರ ಕಾಂಬ್ಳೆ** ೨೦೧೭ ರಲ್ಲಿ ಮಹಾರಾಷ್ಟ್ರದ ಸೋಲಾಪುರ ಜಿಲ್ಲೆಯ ತರಂಗ್ಫಾಲ್ ಗ್ರಾಮದ ಸರಪಂಚ್ ಆಗಿ ಆಯ್ಕೆಯಾದ ತೃತೀಯ ಲಿಂಗ ವ್ಯಕ್ತಿ. ಕಾಂಬ್ಳೆಯವರ ಧ್ಯೇಯವಾಕ್ಯವೆಂದರೆ ಲೋಕಸೇವೆ, ಗ್ರಾಮ ಸೇವೆ, ಅಂದರೆ 'ಹಳ್ಳಿಯ ಸೇವೆಯೇ ಸಾರ್ವಜನಿಕರ ಸೇವೆ'. ಕಾಂಬ್ಳೆ ಇತರ ಆರು ಅಭ್ಯರ್ಥಿಗಳನ್ನು ಸೋಲಿಸಿ ಗ್ರಾಮ ಪಂಚಾಯತಿಯ ಸರಪಂಚ್ ಆಗಿದ್ದರು



ಮಧ್ಯಪ್ರದೇಶದ ಖಂಖಾನಡ್ವಿ ಗ್ರಾಮದ ಭಿಲ್ ಸಮುದಾಯದ ಸದಸ್ಯೆ **ವಂದನಾ ಬಹದ್ದೂರ್ ಮೈದಾ** ಪಿತೃಪ್ರಧಾನ ಕುಟುಂಬದ ನಿಯಮಗಳನ್ನು ಮೀರಿ ತನ್ನ ಗ್ರಾಮದ ಮೊದಲ ಮಹಿಳಾ ಸರಪಂಚ್ ಆಗಿದ್ದಾರೆ. ಅವರು ಹಳ್ಳಿಯ ಮಹಿಳೆಯರನ್ನು ಗ್ರಾಮಸಭೆಗಳಿಗೆ ಹಾಜರಾಗುವಂತೆ ಮನವೊಲಿಸಿದರು. ಶಿಕ್ಷಣ ಮತ್ತು ನೈರ್ಮಲ್ಯದಂತಹ ನಿರ್ಣಾಯಕ ಸಮಸ್ಯೆಗಳನ್ನು ಪರಿಹರಿಸಿದರು. ಇದು ಎಲ್ಲೆಡೆಗೆ ಮನ್ನಣೆಯನ್ನು ಗಳಿಸಿತು. ಗ್ರಾಮೀಣ ಭಾರತವನ್ನು ಪರಿವರ್ತಿಸುವಲ್ಲಿ ಮಹಿಳೆಯರು ಹೇಗೆ ಪ್ರಮುಖ ಪಾತ್ರ ವಹಿಸಬಹುದು ಎಂಬುದನ್ನು ವಂದನಾ ಅವರು ಸಾಧಿಸಿ ತೋರಿಸುತ್ತದೆ.

ಮಹಾರಾಷ್ಟ್ರದ ಅಹಮದ್ ನಗರ ಜಿಲ್ಲೆಯ 'ಹಿವಾರೆ ಬಜಾರ್' ಎಂಬ ಹಳ್ಳಿಯು ಆಗಾಗ ಬರಗಾಲ ಮತ್ತು ಕೃಷಿಯು ಕಡಿಮೆ ಇಳುವರಿಯಿಂದ ಬಾಧಿತವಾಗುತ್ತಿತ್ತು. **ಪೋಪಟ್‌ರಾವ್ ಬಾಗುಜಿ ಪವಾರ್** ಗ್ರಾಮ ಪಂಚಾಯತಿ ಅಧ್ಯಕ್ಷ ಆದ ನಂತರ



ಅವರು ಅಣ್ಣಾ ಹಜಾರೆಯವರ ಮಳೆನೀರು ಕೊಯ್ಲು, ಜಲಾನಯನ ಸಂರಕ್ಷಣೆ ಮತ್ತು ಲಕ್ಷಾಂತರ ಮರಗಳನ್ನು ನೆಡುವ ಕಾರ್ಯಕ್ರಮವನ್ನು ಪ್ರಾಯೋಗಿಕವಾಗಿ ಆರಂಭಿಸಿದರು. ಇವೆಲ್ಲವೂ ಅಂತರ್ಜಲ ಮರುಪೂರಣಕ್ಕೆ ಕೊಡುಗೆ ನೀಡಿದವು. ಗ್ರಾಮಸ್ಥರ ಸಹಯೋಗದೊಂದಿಗೆ, ಹಿವಾರೆ ಬಜಾರ್ ಕೆಲವೇ ವರ್ಷಗಳಲ್ಲಿ ಹಸಿರು ಮತ್ತು ಸಮೃದ್ಧಯುಕ್ತ ಗ್ರಾಮವಾಯಿತು. ಪೋಪಟ್‌ರಾವ್ ಪವಾರ್ ಅವರಿಗೆ ೨೦೨೦ ರಲ್ಲಿ ಪದ್ಮಶ್ರೀ ಪ್ರಶಸ್ತಿ ನೀಡಲಾಯಿತು.

ಗ್ರಾಮ ಪಂಚಾಯಿತಿಗೆ ಪಂಚಾಯತಿ ಕಾರ್ಯದರ್ಶಿಯು ಸಹಾಯ ಮಾಡುತ್ತಾರೆ. ಅವರು ಸಭೆಗಳನ್ನು ಕರೆಯುವುದು ಮತ್ತು ದಾಖಲೆಗಳ ನಿರ್ವಹಣೆಯಂತಹ ಆಡಳಿತಾತ್ಮಕ ಕಾರ್ಯಗಳನ್ನು ನಿರ್ವಹಿಸುತ್ತಾರೆ. ಹೆಚ್ಚಿನ ಗ್ರಾಮ ಪಂಚಾಯಿತಿಗಳಿಗೆ ಭಾರತದ ಅನೇಕ ಭಾಗಗಳಲ್ಲಿ 'ಗ್ರಾಮ ಲೆಕ್ಕಾಧಿಕಾರಿ' ಎಂಬ ಅಧಿಕಾರಿಯು ಸಹಾಯ ಮಾಡುತ್ತಾರೆ. ಅವರು ಗ್ರಾಮಸ್ಥರ ಭೂ ದಾಖಲೆಗಳನ್ನು ನಿರ್ವಹಿಸುತ್ತಾರೆ. ಕೆಲವು ಸಂದರ್ಭಗಳಲ್ಲಿ ಅವರು ತಲೆಮಾರುಗಳಷ್ಟು ಹಳೆಯದಾದ ನಕ್ಷೆಗಳನ್ನು ಇಟ್ಟಿರುತ್ತಾರೆ!

[redacted]

## ಇದರ ಕುರಿತು ಆಲೋಚಿಸಿ

ಈ ಹಳೆಯ ನಕ್ಷೆಗಳು ನಮಗೆ ಹೇಗೆ ಸಹಾಯಕವಾಗಬಹುದು ಎಂದು ನೀವು ಭಾವಿಸುತ್ತೀರಿ? ಭೂತ ಮತ್ತು ವರ್ತಮಾನದ ಗ್ರಾಮೀಣ ನಕ್ಷೆಯ ಬಗ್ಗೆ ಅವು ನಮಗೆ ಏನಾದರೂ ಹೇಳುತ್ತಾವೆಯೇ?

## ಮಕ್ಕಳ ಸ್ನೇಹಿ ಪಂಚಾಯತ್ ಉಪಕ್ರಮ

ಪಂಚಾಯತಗಳು ಮಕ್ಕಳ ಹಿತಾಸಕ್ತಿಗಳನ್ನು ಸೇರಿದಂತೆ ಎಲ್ಲರ ಹಿತಾಸಕ್ತಿಯನ್ನು ಕಾಪಾಡಬೇಕು. ಮಕ್ಕಳ ಸ್ನೇಹಿ ಪಂಚಾಯತಿಯ ಉಪಕ್ರಮವು ಮಕ್ಕಳಿಗೆ ತಮ್ಮ ಯೋಗಕ್ಷೇಮಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಆಲೋಚನೆ, ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವಕಾಶಗಳನ್ನು ಹೊಂದಿರುತ್ತದೆ. ಬಾಲ ಸಭಾಗಳು, ಬಾಲ ಪಂಚಾಯಿತಿಗಳಲ್ಲಿ ಮಕ್ಕಳ ಭಾಗವಹಿಸುವಿಕೆಯನ್ನು ನಿಯಮಿತವಾಗಿ ಉತ್ತೇಜಿಸಲು ಹಲವಾರು ರಾಜ್ಯಗಳಲ್ಲಿ ಕ್ರಮಗಳನ್ನು ತೆಗೆದುಕೊಂಡಿವೆ. ಇದರೊಂದಿಗೆ ಗ್ರಾಮದ ಹಿರಿಯರು ಅವರ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಹಿಡಿಯಲು ಪ್ರಯತ್ನಿಸುತ್ತಾರೆ.

ಉದಾಹರಣೆಗೆ ಮಹಾರಾಷ್ಟ್ರದಲ್ಲಿ ಕೆಲವು ಬಾಲ ಪಂಚಾಯಿತಿಗಳು ಬಾಲಕಾರ್ಮಿಕ ಪದ್ಧತಿ ಮತ್ತು ಬಾಲ್ಯವಿವಾಹವನ್ನು ತೊಡೆದುಹಾಕುವ ಕೆಲಸ ಮಾಡಿವೆ. ಅವರು ಅನೇಕ ಮಕ್ಕಳನ್ನು ಮತ್ತೆ ಶಾಲೆಗೆ ಕರೆತಂದಿದ್ದಾರೆ. ಬಾಲ ಪಂಚಾಯತ್ ಸದಸ್ಯರು ತಮ್ಮ ಮಕ್ಕಳನ್ನು ಮರಳಿ ಶಾಲೆಗೆ ಕಳುಹಿಸುವಂತೆ ಪೋಷಕರು, ವಯಸ್ಕರನ್ನು ಮನವೊಲಿಸಲು ಒಂದಾಗುತ್ತಾರೆ. ಬಾಲ್ಯವಿವಾಹದಿಂದ ಓದುವ ಮಕ್ಕಳಿಗೆ ಆಗುತ್ತಿದ್ದ ತೊಂದರೆಯನ್ನು ಪರಿಹಸರಿಸಿದ್ದಾರೆ. ಮಕ್ಕಳ ಸ್ನೇಹಿ ಉಪಕ್ರಮಗಳನ್ನು ಕೈಗೊಂಡಿದ್ದಕ್ಕಾಗಿ ಗ್ರಾಮ ಪಂಚಾಯಿತಿಗಳು ಪ್ರಶಸ್ತಿಗಳನ್ನು ಗೆದ್ದಿವೆ. ಸಿಕ್ಕಿಂನಿಂದ ಒಂದು ಉದಾಹರಣೆ ಇಲ್ಲಿದೆ:

ಪಶ್ಚಿಮ ಸಿಕ್ಕಿಂನ ಸಾಂಗಕು ರಾಧು ಖಂಡು ಗ್ರಾಮ ಪಂಚಾಯತ ಮಕ್ಕಳ ಅಗತ್ಯತೆಗಳು ಮತ್ತು ಹಕ್ಕುಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿದೆ.

© NCERT not to be republished

ಮಕ್ಕಳಿಗೆ ಸುರಕ್ಷಿತವಾಗಿಸಲು ಪಂಚಾಯತ್ ಶಾಲೆಗಳಿಗೆ ಕಾಂಪೌಂಡ್ ಗೋಡೆಗಳನ್ನು ನಿರ್ಮಿಸಿದೆ. ವಿದ್ಯಾರ್ಥಿಗಳು ಆರೋಗ್ಯಕರವಾಗಿ ಬೇಯಿಸಿದ ಮಧ್ಯಾಹ್ನದ ಊಟವನ್ನು ಪಡೆಯುವುದನ್ನು ಖಚಿತಪಡಿಸಿಕೊಳ್ಳಲು, ಗ್ರಾಮ ಪಂಚಾಯತ್ ಶಾಲೆಗಳಲ್ಲಿ ಅಡುಗೆಮನೆಗಳನ್ನು ನಿರ್ಮಿಸಿದೆ. ಈ ಪ್ರಯತ್ನಗಳಿಗಾಗಿಯೇ ಸಾಂಗ್ಲಿ ರಾಧು ಖಂಡು ಗ್ರಾಮವನ್ನು ಮಕ್ಕಳ ಸ್ನೇಹಿ ಗ್ರಾಮ ಪಂಚಾಯಿತಿ ಎಂದು ಘೋಷಿಸಲಾಗಿದೆ.

ರಾಜಸ್ಥಾನದ ಮತ್ತೊಂದು ಉದಾಹರಣೆಯನ್ನು ಸಹ ನೋಡೋಣ:

'ಕೆಲವು ದಶಕಗಳ ಹಿಂದೆ ಬಂಕರ್ ರಾಯ್ ಅವರ 'ಬೇರ್‌ಫೂಟ್ ಕಾಲೇಜು' ಉಪಕ್ರಮದ ಒಂದು ಭಾಗವಾದ 'ಮಕ್ಕಳ ಸಂಸತ್ತು' ರಾಜಸ್ಥಾನದ ಗ್ರಾಮೀಣ ಪ್ರದೇಶಗಳಲ್ಲಿನ ದೀನದಲಿತ ಮಕ್ಕಳನ್ನು ಶಿಕ್ಷಣ ಮತ್ತು ಪ್ರಜಾಪ್ರಭುತ್ವದ ಭಾಗವಹಿಸುವಿಕೆಯ ಮೂಲಕ ಸಬಲೀಕರಣಗೊಳಿಸಿತು. ೮ ರಿಂದ ೧೪ ವರ್ಷ ವಯಸ್ಸಿನ ಮಕ್ಕಳು ಆಡಳಿತ ಪ್ರಕ್ರಿಯೆಗಳಲ್ಲಿ ತೊಡಗಿದ್ದಾರೆ. ರಾತ್ರಿ ಶಾಲೆಗಳು ಮತ್ತು ಸಂಸತ್ತಿನಂತಹ ಚುನಾವಣೆಗಳ ಮೂಲಕ ಪ್ರಜಾಪ್ರಭುತ್ವ ಮತ್ತು ಸಾಮಾಜಿಕ ಜವಾಬ್ದಾರಿಯ ಬಗ್ಗೆ ಕಲಿಯುತ್ತಿದ್ದಾರೆ. 'ಸಂಸತ್ತು' ಮತದಾರರ ಗುರುತಿನ ಚೀಟಿಗಳು ಮತ್ತು ಪ್ರಚಾರ ಸೇರಿದಂತೆ ಔಪಚಾರಿಕ ಕಾರ್ಯವಿಧಾನಗಳನ್ನು ಅನುಸರಿಸಿತು. ಚುನಾಯಿತ ಪ್ರತಿನಿಧಿಗಳು ಶಾಲಾ ನಿರ್ವಹಣೆಯ ಮೇಲ್ವಿಚಾರಣೆ ಮತ್ತು ಸಮುದಾಯದ ಅಗತ್ಯಗಳಿಗೆ ಸಲಹೆ ನೀಡುವ 'ಸಂಪುಟ'(ಕ್ಯಾಬಿನೆಟ್) ಅನ್ನು ರಚಿಸಿದರು. ಶಾಲಾ ನಿರ್ವಹಣೆಯ ಮೇಲ್ವಿಚಾರಣೆ ಮತ್ತು ಸಮುದಾಯದ ಅಗತ್ಯಗಳನ್ನು ಪ್ರತಿಪಾದಿಸಿದರು. ಈ ಉಪಕ್ರಮವು ನಾಯಕತ್ವದ ಕೌಶಲ್ಯಗಳು ಮತ್ತು ಸಾಮಾಜಿಕ ಜಾಗೃತಿಯನ್ನು ಬೆಳೆಸಿತು. ಇದು ಮಕ್ಕಳಿಗೆ ಸಾಮಾಜಿಕ ಮಾನದಂಡಗಳನ್ನು ಪ್ರಶ್ನಿಸಲು ಮತ್ತು ಬದಲಾವಣೆಯನ್ನು ಪ್ರತಿಪಾದಿಸಲು ಅನುವು ಮಾಡಿಕೊಟ್ಟಿತು. ಶಿಕ್ಷಣದ ಲಭ್ಯತೆ, ನೈರ್ಮಲ್ಯ ಮತ್ತು ಸಾಮಾಜಿಕ ಸಮಾನತೆ, ಸಮುದಾಯದ ಅಭಿವೃದ್ಧಿಗೆ ಕೊಡುಗೆ



ನೀಡುವಂತಹ ಸಮಸ್ಯೆಗಳನ್ನು ಮಕ್ಕಳು ಸಕ್ರಿಯವಾಗಿ ಪರಿಹರಿಸಿದರು. ಮಕ್ಕಳ ಸಂಸತ್ತಿನ ಉಪಕ್ರಮವು 2001 ರಲ್ಲಿ ವಿಶ್ವದ ಮಕ್ಕಳ ಗೌರವ ಪ್ರಶಸ್ತಿ ಸೇರಿದಂತೆ ಅನೇಕ ಪ್ರಶಸ್ತಿಗಳನ್ನು ಪಡೆಯಿತು.

### ನಾವೀಗ ಅನ್ವೇಷಿಸೋಣ:

ತರಗತಿಯ ಚಟುವಟಿಕೆಯಾಗಿ ನಾಲ್ಕು ಅಥವಾ ಐದು ವಿದ್ಯಾರ್ಥಿಗಳು 'ಬಾಲ ಪಂಚಾಯತ' ಅನ್ನು ರಚಿಸಿ, ತರಗತಿಯ ಉಳಿದವರು ತಾವು ಗ್ರಾಮಸ್ಥರು ಎಂದು ಕಲ್ಪಿಸಿಕೊಳ್ಳಲಿ. ಗ್ರಾಮಸಭೆಯು ಯಾವ ವಿಷಯಗಳನ್ನು ಚರ್ಚಿಸುತ್ತದೆ? ಅದು ಯಾವ ಸಮಸ್ಯೆಗಳನ್ನು ಎದುರಿಸಬಹುದು? ಅದು ಯಾವ ಪರಿಹಾರಗಳನ್ನು ಪ್ರಸ್ತಾಪಿಸುತ್ತದೆ? ಎನ್ನುವುದನ್ನು ತಿಳಿಯಿರಿ.

## ಪಂಚಾಯತ್ ಸಮಿತಿ ಮತ್ತು ಜಿಲ್ಲಾ ಪರಿಷತ್

ಇದೇ ರೀತಿಯ ಸಂಸ್ಥೆಗಳು ತಾಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಅಸ್ತಿತ್ವದಲ್ಲಿವೆ. ಅವು ಗ್ರಾಮ ಮಟ್ಟಕ್ಕಿಂತ ಮೇಲಿವೆ. ಅವುಗಳ ಹೆಸರುಗಳನ್ನು ನಾವು ಪುಟ್ಟ ೧೬೪ ರ ಚಿತ್ರ ೧೧.೧ ರಲ್ಲಿನ ಪಿರಮಿಡ್ ರೇಖಾಚಿತ್ರದಲ್ಲಿ ಪಟ್ಟಿ ಮಾಡಲಾಗಿದೆ. ತಾಲೂಕು ಮಟ್ಟದಲ್ಲಿ ಪಂಚಾಯತ ಸಮಿತಿಯು ಜಿಲ್ಲಾ ಮಟ್ಟದಲ್ಲಿ ಗ್ರಾಮ ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ/ಪರಿಷದನ್ ನಡುವಿನ ಕೊಂಡಿಯಾಗಿದೆ. ಈ ಸಂಸ್ಥೆಗಳ ಸದಸ್ಯರನ್ನು ಸ್ಥಳೀಯ ಜನರು ಆಯ್ಕೆ ಮಾಡುತ್ತಾರೆ. ಜೊತೆಗೆ ಅವರು ಪ್ರದೇಶದ ಹಳ್ಳಿಗಳ ಸರಪಂಚರು, ರಾಜ್ಯ ವಿಧಾನಸಭೆಯ ಸ್ಥಳೀಯ ಸದಸ್ಯರಂತಹ ಇತರ ಸದಸ್ಯರನ್ನು ಒಳಗೊಂಡಿರಬಹುದು.

ಪಂಚಾಯತ ಸಮಿತಿಗಳ ರಚನೆಯು ರಾಜ್ಯದಿಂದ ರಾಜ್ಯಕ್ಕೆ ಭಿನ್ನವಾಗಿರುತ್ತದೆ. ಆದರೆ ಸ್ಥಳೀಯ ಜನರ ಭಾಗವಹಿಸುವಿಕೆಯನ್ನು ಬಲಪಡಿಸುವಲ್ಲಿ ಅವುಗಳ ಪಾತ್ರವು ಒಂದೇ ಆಗಿರುತ್ತದೆ. ಅವರು ಗ್ರಾಮ ಪಂಚಾಯಿತಿಗಳಾದ್ಯಂತ ವಿಷಯಗಳನ್ನು ಸಮನ್ವಯಗೊಳಿಸುತ್ತಾರೆ, ಉದಾಹರಣೆಗೆ ಎಲ್ಲಾ ಗ್ರಾಮ ಪಂಚಾಯಿತಿಗಳಿಂದ ಅಭಿವೃದ್ಧಿ ಯೋಜನೆಗಳನ್ನು ಸಂಗ್ರಹಿಸುವ ಮೂಲಕ ಕ್ರಮವಾಗಿ ಜಿಲ್ಲಾ ಅಥವಾ ರಾಜ್ಯ ಮಟ್ಟದಲ್ಲಿ ಜಾರಿಗೊಳಿಸಲು ಒಂದಾಗಿ ಕಾರ್ಯ ನಿಭಾಯಿಸುತ್ತಾರೆ. ಅಂತಹ ಅಭಿವೃದ್ಧಿ ಯೋಜನೆಗಳಿಗೆ, ಗ್ರಾಮೀಣ ಪ್ರದೇಶಗಳಲ್ಲಿ ಎಲ್ಲಾ ಕಾಲದಲ್ಲಿ ರಸ್ತೆಗಳ ನಿರ್ಮಾಣವನ್ನು ಉತ್ತೇಜಿಸುವ 'ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ'ಯಂತಹ ಸರ್ಕಾರಿ ಯೋಜನೆಗಳಿಗೆ ಹಣವನ್ನು ಹಂಚಿಕೆ ಮಾಡಲು ಅನುಕೂಲ ಮಾಡಿಕೊಡುತ್ತದೆ.

ಎಲ್ಲಾ ಮೂರು ಹಂತಗಳಲ್ಲಿ, ಜನಸಂಖ್ಯೆಯ ಅನುಕೂಲಕರ ವಿಭಾಗಗಳು ತಮ್ಮ ಅಗತ್ಯಗಳು ಮತ್ತು ಸಮಸ್ಯೆಗಳನ್ನು ಪರಿಹರಿಸಲುಸ ವಿಶೇಷ ನಿಯಮಗಳನ್ನು ಮಾಡಲಾಗಿದೆ. ಈ ಸಂಸ್ಥೆಗಳಲ್ಲಿ ಮೂರನೇ ಒಂದು ಭಾಗದಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಕಾಯ್ದಿರಿಸುವ ಅವಕಾಶವೂ ಇದೆ.

© NCERT not to be republished

## ಇದರ ಕುರಿತು ಆಲೋಚಿಸಿ

ಸಮಾಜದ ಅನನುಕೂಲಕರ ವರ್ಗಗಳ ಅಗತ್ಯಗಳು ಮತ್ತು ಸಮಸ್ಯೆಗಳ ಬಗ್ಗೆ ಸರ್ಕಾರ ಹೆಚ್ಚಿನ ಗಮನ ಹರಿಸುವುದು ಮುಖ್ಯ ಎಂದು ನೀವು ಏಕೆ ಭಾವಿಸುತ್ತೀರಿ?

## ನಾವೀಗ ಅನ್ವೇಷಿಸೋಣ

→ ಕೇಂದ್ರ ಮಟ್ಟದಲ್ಲಿ ಮತ್ತು ಪಂಚಾಯತ್ ಮಟ್ಟದಲ್ಲಿ ಹಾಗೂ ಆಡಳಿತ ವ್ಯವಸ್ಥೆಯ ನಡುವಿನಲ್ಲಿ ಯಾವ ಸಾಮ್ಯತೆ ಮತ್ತು ವ್ಯತ್ಯಾಸಗಳನ್ನು ನೀವು ಗಮನಿಸುತ್ತೀರಿ? (ಸೂಚನೆ: ಅಗತ್ಯವಿದ್ದರೆ ಅಧ್ಯಾಯ ೧೦ ಅನ್ನು ಮತ್ತೆ ನೋಡಿ.)

→ ಕೆಲವು ಪಂಚಾಯತ್ ಸದಸ್ಯರನ್ನು ಭೇಟಿ ಮಾಡುವ ಅವಕಾಶ ನಿಮಗೆ ಸಿಕ್ಕರೆ, ನೀವು ಅವರನ್ನು ಯಾವ ಪ್ರಶ್ನೆಗಳನ್ನು ಕೇಳಲು ಬಯಸುತ್ತೀರಿ? ಪ್ರಶ್ನಾವಳಿಯನ್ನು ರಚಿಸಲು ಸಣ್ಣ ಗುಂಪುಗಳಲ್ಲಿ ಚರ್ಚಿಸಿ. ಕೆಲವು ಗ್ರಾಮ ಪಂಚಾಯತ್ ಸದಸ್ಯರನ್ನು ಭೇಟಿ ಮಾಡಿ ಅಥವಾ ಅವರನ್ನು ನಿಮ್ಮ ಶಾಲೆಗೆ ಆಹ್ವಾನಿಸಿ. ನಿಮ್ಮ ಪ್ರಶ್ನಾವಳಿಯಲ್ಲಿರುವ ಪ್ರಶ್ನೆಗಳನ್ನು ಅವರಿಗೆ ಕೇಳಿ ಮತ್ತು ಒಂದು ಸಣ್ಣ ವರದಿಯನ್ನು ಬರೆಯಿರಿ.

ಪಂಚಾಯತ ರಾಜ್ ಸಂಸ್ಥೆಗಳ ರಚನೆ ಮತ್ತು ಕಾರ್ಯಗಳು ಬೇರೆ ಬೇರೆ ರಾಜ್ಯಗಳಲ್ಲಿ ಕೆಲವು ಭಿನ್ನತೆಗಳಿವೆ ಎಂಬುದನ್ನು ನಾವು ನೆನಪಿನಲ್ಲಿಡೋಣ. ಏಕೆಂದರೆ ಆ ಸಂಸ್ಥೆಗಳ ಮೇಲೆ ರಾಜ್ಯಗಳಿಗೆ ಅಧಿಕಾರವಿದೆ. ಆದರೆ ಅವರ ಉದ್ದೇಶಗಳು ಒಂದೇ. ಗ್ರಾಮಸ್ಥರು ತಮ್ಮ ಹಳ್ಳಿಗಳ, ಸ್ಥಳೀಯ ಪ್ರದೇಶದ ನಿರ್ವಹಣೆ ಮತ್ತು ಅಭಿವೃದ್ಧಿಯಲ್ಲಿ ಸಕ್ರಿಯವಾಗಿ ಭಾಗವಹಿಸಲು ಅನುವು ಮಾಡಿಕೊಡುವುದು ಆಗಿದೆ.

ಕೌಟಿಲ್ಯನ (ನಂತರ ಚಾಣಾಕ್ಯ ಎಂದು ಕರೆಯಲಾಯಿತು) 'ಅರ್ಥಶಾಸ್ತ್ರವು' ಸುಮಾರು ೨,೩೦೦ ವರ್ಷಗಳ ಹಿಂದೆ ಆಡಳಿತದ ಕುರಿತು ಬರೆದ ಪ್ರಾಚೀನ ಕೃತಿಯಾಗಿದೆ. ಇತರ ವಿಷಯಗಳೆಂದರೆ ರಾಜ್ಯವನ್ನು ಹೇಗೆ ರಚಿಸಬೇಕು ಮತ್ತು ಮುನ್ನಡೆಸಬೇಕು?, ಆರ್ಥಿಕತೆಯನ್ನು ಹೇಗೆ ಸಮೃದ್ಧಗೊಳಿಸಬಹುದು, ಆಡಳಿತಗಾರನ ಕರ್ತವ್ಯಗಳು ಯಾವುವು ಮತ್ತು ಯುದ್ಧವನ್ನು ಹೇಗೆ ನಡೆಸಬೇಕು ಎಂಬುದನ್ನು ವಿವರಿಸುತ್ತದೆ. ರಾಜನೀತಿಯಲ್ಲಿ ಪರಿಣಿತನಾದ ಕೌಟಿಲ್ಯನು ಹಳ್ಳಿಯಿಂದ ಪ್ರಾದೇಶಿಕ ರಾಜಧಾನಿಯವರೆಗೆ ಸಂಪೂರ್ಣ ಆಡಳಿತಾತ್ಮಕ ರಚನೆಯನ್ನು ಹೇಗೆ ಸ್ಥಾಪಿಸಬೇಕು ಎಂಬುದನ್ನು ವಿವರಿಸುತ್ತಾನೆ:

© NCERT not to be republished

"ರಾಜನು ಪ್ರತಿ ೧೦ ಹಳ್ಳಿಗಳಿಗೆ ಒಂದು ಸಂಗ್ರಾಹಣವನ್ನು (ಜಿಲ್ಲಾ ಉಪಕೇಂದ್ರ) ಸ್ಥಾಪಿಸಬೇಕು; ಪ್ರತಿ ೧೦೦೦ ಹಳ್ಳಿಗಳಿಗೆ ಒಂದು ಕರ್ವತಿಕಾ (ಜಿಲ್ಲಾ ಕೇಂದ್ರ); ಪ್ರತಿ ೪೦೦ ಹಳ್ಳಿಗಳಿಗೆ ಒಂದು ದ್ರೋಣಮುಖ; ಮತ್ತು ಪ್ರತಿ ೮೦೦ ಹಳ್ಳಿಗಳಿಗೆ ಒಂದು ಸ್ಥಾನೀಯ (ಪ್ರಾಂತೀಯ ಪ್ರಧಾನ ಕಚೇರಿ) ಸ್ಥಾಪಿಸಬೇಕೆಂದು ಹೇಳಯತ್ತದೆ."

ಇಂದಿನ ಭಾಷೆಯಲ್ಲಿ, ಈ ನಾಲ್ಕು ವರ್ಗಗಳಿಗೆ ನಾವು ನೀಡುವ ಹೆಸರುಗಳು ಯಾವುವು? ಇದೇ ರೀತಿಯ ರಚನೆಯನ್ನು ಬಹಳ ಹಿಂದೆಯೇ ಯೋಚಿಸಲಾಗಿತ್ತು ಎಂಬುದು ಆಶ್ಚರ್ಯಕರವಲ್ಲವೇ?

## ನಾವು ಮುಂದುವರಿಯುವ ಮೊದಲು ...

→ ಗ್ರಾಮೀಣ ಪ್ರದೇಶಗಳಲ್ಲಿನ ಸ್ಥಳೀಯ ಸರ್ಕಾರವನ್ನು ಮೂರು ಹಂತದ ವ್ಯವಸ್ಥೆಯಾಗಿ ಸಂಘಟಿಸಲಾಗಿದೆ.

→ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಪ್ರಜಾಪ್ರಭುತ್ವವು ಎರಡೂ ಕಾರ್ಯನಿರ್ವಹಿಸುತ್ತದೆ. ಜನರ ನೇರ ಭಾಗವಹಿಸುವಿಕೆಯ ಮೂಲಕ ಮತ್ತು ಅವರ ಚುನಾಯಿತ ಪ್ರತಿನಿಧಿಗಳ ಮೂಲಕ.

→ ಪಂಚಾಯತ್ ರಾಜ್ ಸಂಸ್ಥೆಗಳು ಗ್ರಾಮೀಣ ಪ್ರದೇಶದ ಜನರಿಗೆ ಸ್ವಲ್ಪಮಟ್ಟಿಗೆ ಸ್ವಯಂ-ಆಡಳಿತವನ್ನು ನೀಡುತ್ತವೆ, ಆದ್ದರಿಂದ ಅವರು ತಮ್ಮ ಸಮಸ್ಯೆಗಳನ್ನು ನಿರ್ವಹಿಸಬಹುದು ಮತ್ತು ಅಭಿವೃದ್ಧಿ ಯೋಜನೆಗಳಲ್ಲಿ ಸಹಕರಿಸಬಹುದು.

## ಪ್ರಶ್ನೆಗಳು, ಚಟುವಟಿಕೆಗಳು ಮತ್ತು ಯೋಜನೆಗಳು

೧. ನಿಮ್ಮನ್ನು ಪರೀಕ್ಷಿಸಿಕೊಳ್ಳಿ - ಮೇಲಿನ ಪಠ್ಯವನ್ನು ನೋಡದೆ, ಪಂಚಾಯತ್ ರಾಜ್ ವ್ಯವಸ್ಥೆಯ ಮೂರು ಹಂತಗಳನ್ನು ಹೆಸರಿಸಬಹುದೇ? ಮೂರು ಹಂತಗಳಲ್ಲಿ ಪ್ರತಿಯೊಂದರ ಪ್ರಮುಖ ಕಾರ್ಯಗಳು ಯಾವುವು?

೨. ಗ್ರಾಮದ ರಸ್ತೆ ಬದಿಯಲ್ಲಿ ಬಿದ್ದಿರುವ ಪ್ಲಾಸ್ಟಿಕ್ ಚೀಲಗಳ ಸಮಸ್ಯೆಯ ಬಗ್ಗೆ ಸರಪಂಚ್‌ಗೆ ಒಂದು ಪತ್ರ ಬರೆಯಿರಿ.

೩. ನಿಮ್ಮ ದೃಷ್ಟಿಯಲ್ಲಿ, ಯಾವ ರೀತಿಯ ವ್ಯಕ್ತಿಯು ಗ್ರಾಮ ಪಂಚಾಯತ್ ಸದಸ್ಯನಾಗಿರಬೇಕು?

೪. ನೀವು ಹಳ್ಳಿಯ ಶಾಲೆಯಲ್ಲಿ ಓದುತ್ತಿದ್ದೀರಿ ಎಂದು ಭಾವಿಸೋಣ. ಶಾಲೆಯು ಹೆದ್ದಾರಿಯ ಪಕ್ಕದಲ್ಲಿದೆ ಮತ್ತು ವಿದ್ಯಾರ್ಥಿಗಳು ಶಾಲೆಗೆ ಬಂದಾಗ ಅಥವಾ ದಿನದ ಕೊನೆಯಲ್ಲಿ ಹೊರಡುವಾಗ ರಸ್ತೆ ದಾಟಲು ಕಷ್ಟಪಡುತ್ತಾರೆ. ಈ ಸಮಸ್ಯೆಯನ್ನು ಪರಿಹರಿಸಲು ಆಯ್ಕೆಗಳು ಯಾವುವು? ಪಂಚಾಯತ್ ರಾಜ್‌ನಲ್ಲಿ ಯಾವ ಸಂಸ್ಥೆಗಳು ನಿಮಗೆ ಸಹಾಯ ಮಾಡಬಹುದು? ವಿದ್ಯಾರ್ಥಿಗಳು ಏನು ಮಾಡಬಹುದು?

© NCERT not to be republished

# ನೂಡಲ್ಸ್/ಅಭ್ಯಾಸದ ಟಿಪ್ಪಣಿಗಳು

© NCERT not to be republished

*'ನೂಡಲ್ಸ್' ಎಂಬುದು 'ಟಿಪ್ಪಣಿಗಳು ಮತ್ತು ಡೂಡಲ್ಸ್'ಗಳಿಗಾಗಿ ನಮ್ಮ ಸಂಕ್ಷಿಪ್ತ ರೂಪವಾಗಿದೆ!